ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೭೨೬ (೧೭೦೮)

ಸದಸ್ಯರ ಹೆಸರು : ಶ್ರೀ ಧ್ರುವನಾರಾಯಣ ಆರ್
(ಸಂತೇಮರಕ್ಕೆ)

ಉತ್ತರಿಸುವ ಸಚಿವರು : ಶ್ರೀ ಬಂಡೆಪ್ಪ ಖಾಶೆಂಪೂರ
(ಕೃಷಿ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಹೊಸ ಕೃಷಿ ವಿಶ್ವವಿದ್ಯಾನಿಲಯಗಳೆಷ್ಟು ?	ರಾಜ್ಯದಲ್ಲಿ ಯಾವುದೇ ಹೊಸ ಕೃಷಿ ವಿಶ್ವವಿದ್ಯಾನಿಲಯಗಳಿರುವುದಿಲ್ಲ.
ಆ)	ಹೊಸ ಹೊಸ ಕೃಷಿ ವಿಶ್ವವಿದ್ಯಾನಿಲಯಗಳ ಸ್ಥಾಪನೆ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ?	ಇಲ್ಲ.
ಇ)	ಭೌಗೋಳಿಕ ಸಮತೋಲನವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಸಾರ್ವಜನಿಕರ ಹಾಗೂ ರೈತರ ಹಿತದೃಷ್ಟಿಯಿಂದ ರಾಜ್ಯದ ವ್ಯಾಪ್ತಿಯನ್ನು ಆಧರಿಸಿ ಬೇಕಾಗುವ ಒಟ್ಟು ಕೃಷಿ ವಿಶ್ವವಿದ್ಯಾನಿಲಯಗಳೆಷ್ಟು?	ಈ ಮೊದಲು ರಾಜ್ಯದಲ್ಲಿ ಸಂಪೂರ್ಣ ಭೌಗೋಳಿಕ ವಿಸ್ತಾರದೊಂದಿಗೆ ಒಂದೇ ಒಂದು ಕೃಷಿ ವಿಶ್ವವಿದ್ಯಾನಿಲಯವಿತ್ತು, ಸಾರ್ವಜನಿಕರ ಹಾಗೂ ರೈತರ ಬೇಡಿಕೆ ಹಗೂ ಅವಶ್ಯಕತೆಗಳನ್ನು ಪರಿಗಣಿಸಿ ಮತ್ತೊಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಅದಕ್ಕನುಸಾರವಾಗಿ ಕೃಷಿ ವಿಶ್ವವಿದ್ಯಾನಿಲಯ. ಧಾರವಾಡವನ್ನು ೧೯೮೬ರಲ್ಲಿ ಸ್ಥಾಪಿಸಲಾಗಿದೆ. ಉತ್ತರ ಕರ್ನಾಟಕದ ೧೨ ಜಿಲ್ಲೆಗಳ ವ್ಯಾಪ್ತಿಯನ್ನು ಕೃಷಿ ವಿಶ್ವವಿದ್ಯಾನಿಲಯ, ಧಾರವಡ ಹೊಂದಿರುತ್ತದೆ. ರೈತರ ಬೇಡಿಕೆ

		ಹಗೂ ಅವಶ್ಯಕತೆಗಳನ್ನು ನೋಡಲಾಗಿ ರಾಜ್ಯದ ಉತ್ತರ ಹಗೂ ದಕ್ಷಿಣ ಭಾಗಗಳಲ್ಲಿ ಈ ಎರಡು ವಿಶ್ವವಿದ್ಯಾನಿಲಯಗಳು ರೈತರ ಬೇಡಿಕೆ ಹಾಗೂ ಅವಶ್ಯಕತೆಗಳನ್ನು ಪೂರೈಸುತ್ತಿಲಿವೆ. ಆದುದರಿಂದ ರಾಜ್ಯದಲ್ಲಿ ಯಾವುದೇ ಕೃಷಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವ ಅವಶ್ಯಕತೆ ಇರುವುದಿಲ್ಲ.
ಈ)	ಮೈಸೂರು – ಚಾಮರಾಜನಗರ – ಕೊಡಗು ಭಾಗದಲ್ಲಿ ಕೃಷಿ ವಿಶವವಿದ್ಯಾನಿಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿದೆಯೇ?	ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೭೨೭ (೨೧೩೨)

ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗವಾರಪಲ್ಲಿ (ಔರಾದ್)

ಉತ್ತರಿಸುವ ಸಚಿವರು : ಶ್ರೀ ಗೋವಿಂದ ಎಂ ಕಾಲದೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಕರ ವ್ಯವಹಾರಗಳ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪ್ರಸಕ್ತಿ -- ---------- ಪಡಿತರ ಚೀಟಿಗಳನ್ನು ವಿತರಣೆ ಮಾಡುವ ಗುರಿ	ರಾಜ್ಯದಲ್ಲಿ ಪ್ರಸಕ್ತಿ ಸಾಲಿನಲ್ಲಿ ಬಿಪಿಎಲ್ ಪಡಿತರ ಚೀತಿಗಳನ್ನು ವಿತರಣ ಮಾಡುವ ನಿರ್ಧಿಷ್ಟ ಗುರಿ ಇರುವುದಿಲ್ಲ. ಆದರೆ ಮನೆ ಮನೆ ಸಮೀಕ್ಷೆ ಮಾಡಲಾದ ೫೩,೮೭,೧೦೩